ಸಾಕ್ಷಿದಾರನನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 18.03.2026.

**ಪಾಟೀ ಸವಾಲು – ಪ್ರತಿವಾದಿ ಪರಃ ವಕೀಲರಿಂದಃ**

ನಾನು ಎಸ ಎಸ ಎಲ್ ಸಿ ವರೆಗೆ ವಿಧ್ಯಾಬಾಸ ಮಾಡಿದ್ದೇನೆ. ನನಗೆ ಮೂರು ಜನ ಮಕ್ಕಳು ಇರುತ್ತಾರೆ. ಮೂರು ಜನ ಮಕ್ಕಳನ್ನು ನಾನೇ ಶಾಲೆಗೆ ಸೇರಿಸಿದ್ದೇನೆ ಅಂದರೆ ಸರಿಯಲ್ಲಾ. ನನ್ನ ಹೆಂಡತಿ 1 ನೇ ತರಗತಿ ಓದಿರುತ್ತಾಳೆ. ಅವರಿಗೆ ಕನ್ನಡ ಓದಲು ಬರೆಯಲು ಬರುವುದಿಲ್ಲಾ. ನನ್ನ ಹೆಂಡತಿ ಮಾಹಿತಿ ಕೊಟ್ಟ ಪ್ರಕಾರ ನನ್ನ ಮಗಳ ಹೆಸರು ನೇಹಾ ಮೇಹಬೂಬಸಾಬ ಸಾಲಿ ಅಂತಾ ದಾಖಲು ಮಾಡಿದ್ದಾರೆ ಅಂದರೆ ಸರಿ. ಶಾಲಾ ಶಿಕ್ಷಕರ ತಪ್ಪು ಏನು ಇಲ್ಲಾ ಅಂದರೆ ಸರಿ. ದಾವಾ ದಾಖಲು ಮಾಡಲು ನಾನೇ ಮಾಹಿತಿ ನೀಡಿರುತ್ತೇನೆ. ವಾದ ಪತ್ರದ ಪ್ಯಾರಾ ನಂಬರ 2 ರಲ್ಲಿ ತಂದೆಯ ಕಾಲಂದಲ್ಲಿ ಮೇಹಬೂಬಸಾಬ ಅಂತಾ ದಾಖಲಿಸಿಕೊಳ್ಳುವ ಬದಲಾಗಿ ನೀಹಾ ಮೇಹಬೂಬಸಾಬ ಸಾಲಿ ಅಂತಾ ನಜರಚೂಕಿನಿಂದ ತಪ್ಪಾಗಿ ನಮೂದಿಸಿಕೊಂಡಿದ್ದು ಇರುತ್ತದೆ ಅಂತಾ ಬರೆಸಿದ್ದೇನೆ ಅಂದರೆ ಸರಿ. ನಾನು ಪ್ಯಾರಾ ನಂಬರ 2 ರಲ್ಲಿ ಬರೆದ ಹಾಗೇ ಮೇಹಬೂಬಸಾಬ ಅಂತಾ ಪ್ರತಿವಾದಿಯರು ದಾಖಲು ಮಾಡಿಕೊಂಡಿದ್ದರು ಸಹ ಮತ್ತೇ ಮೇಹಬೂಬಸಾಬ ಅಂತಾ ದಾಖಲು ಮಾಡಲು ಕೇಳಿದ್ದೇನೆ ಅಂನದರೆ ಸರಿ. ನನ್ನ ಮಗಳ ಹೆಸರು ಶಾಲಾ ದಖಲಾತಿಯಲ್ಲಿ ನೀಹಾ ಅಂತಾ ಇದೆ ಅಂದರೆ ಸರಿ. ನನ್ನ ಮಗಳ ಹೆಸರು ಮತ್ತು ತಂದೆಯ ಹೆಸರು ಸರಿ ಇದ್ದರೂ ಸಹ ಸುಳ್ಳು ದಾವೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲಾ. ವಾದ ಪತ್ರದ ಪ್ಯಾರಾ ನಂಬರ 3 ರಲ್ಲಿ ಅವಳ ಹೆಸರು ಮತ್ತು ತಂದೆಯ ಹೆಸರು ತಪ್ಪಾಗಿ ಇದೆ ಅಂತಾ ಸುಳ್ಳು ಬರೆಸಿದ್ದೇನೆ ಅಂದರೆ ಸರಿ. ನನ್ನ ವಾದ ಪತ್ರದ ವಿನಂತಿಯಲ್ಲಿ ನನ್ನ ಮಗಳ ಹೆಸರು ಮತ್ತು ನನ್ನ ಹೆಸರು ತಿದ್ದುಪಡಿ ಮಾಡಲು ಕೇಳಿದ್ದೇನೆ ಅಂದರೆ ಸರಿ. ಆದ್ದರಿಂದ ನನ್ನ ಮಗಳ ಹೆಸರು ತಿದ್ದುಪಡಿ

ಮಾಡಲು ಅವಶ್ಯಕತೆ ಇಲ್ಲಾ ಅಂದರೆ ಸರಿ ಆದರೆ ತಂದೆಯ ಹೆಸರು ತಿದ್ದುಪಡಿ ಆಗಬೇಕು. ನಾನು ಪ್ರತಿವಾದಿಯರಿಗೆ ನೋಟಿಸ ನೀಡಿರುವುದಿಲ್ಲಾ. ಆದರೆ ಮೌಖಿಕವಾಗಿ ಕೇಳಿರುತ್ತೇನೆ. 2025 ರಲ್ಲಿ ಜೂನ್ ಮುಗಿದ ಮೇಲೆ ಶಾಲೆಗೆ ಹೋಗಿ ಕೇಳಿರುತ್ತೇನೆ. ನಾನು ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ನಾನು ದಾವೆ ಹಾಕುವ ಪೂರ್ವದಲ್ಲಿ ಪತ್ರಿಕಾ ಪ್ರಕಟಣೆ ಹೊರಡಿಸಿರುವುದಿಲ್ಲಾ. ಪ್ರತಿವಾದಿಯರದು ಯಾವುದೇ ತಪ್ಪು ಇಲ್ಲದೇ ಇದ್ದರೂ ಸಹ ಸರ್ಕಾರಿ ನೌಕರರು ಇರುವುದರಿಂದ ಅವರಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ನಾನು ನ್ಯಾಯಾಲಯದಿಂದ ಯಾವುದೇ ಪರಿಹಾರ ಪಡೆಯಲು ಅರ್ಹ ಇಲ್ಲಾ ಅಂದರೆ ಸರಿಯಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು,

ಬ್ಯಾಡಗಿ.